ಕರ್ನಾಟಕ ವಿಧಾನಸಭೆ
ಮಂಗಳವಾರ ದಿನಾಂಕ 6ನೇ ಫೆಬ್ರವರಿ 2007ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ
ಪೀಠವನ್ನು ಅಲಂಕರಿಸಿದರು.

1. ಸಂತಾಪ ಸೂಚನೆ

ವಿಷಯ: ಮಾನ್ಯ ಸದಸ್ಯರಾದ ಯು.ಟಿ. ಫರೀದ್‌ರವರ ನಿಧನ.

ಮಾನ್ಯ ಸಭಾಧ್ಯಕ್ಷರು:

ವಿಧಾನ ಸಭೆಯ ಹಾಲಿ ಸದಸ್ಯರಾದ ಶ್ರೀ ಯು.ಟಿ. ಫರೀದ್ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ವಿಧಾನ ಸಭೆಯ ಹಾಲಿ ಸದಸ್ಯರಾಗಿದ್ದ ಶ್ರೀ ಯು.ಟಿ. ಫರೀದ್ ಅವರು 1938ನೇ ಇಸವಿ ಜುಲೈ 15 ರಂದು ಮಂಗಳೂರು ತಾಲ್ಲೂಕು ಕರೋಪಾಡಿ ಗ್ರಾಮದಲ್ಲಿ ಜನಿಸಿದ್ದು, ಕಲೆ ಹಾಗೂ ಕಾನೂನು ಪದವೀಧರರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು ಸಾಮಾಜಿಕ ಸೇವೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದು, ಉಳ್ಳಾಲದಲ್ಲಿರುವ ಸೈಯದ್ ಮದಾನಿ ಚಾರಿಟಬಲ್ ಟ್ರಸ್ಟಿನ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಶ್ರೀಯುತರು ಐದು, ಆರು ಹಾಗೂ ಹನ್ನೊಂದನೆ ವಿಧಾನಸಭೆಗೆ ಚುನಾಯಿತರಾಗಿದ್ದು, ಹನ್ನೆರಡನೇ ವಿಧಾನಸಭೆಗೂ ಪುನರಾಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ಇಂದು ದಿನಾಂಕ 06.02.2007 ರಂದು ಮುಂಜಾನೆ ನಿಧನ ಹೊಂದಿರುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಯು.ಟಿ. ಫರೀದ್ ರವರು ಆ ಭಾಗದ ಜನನಾಯಕರಾಗಿದ್ದರು. ಈಗಾಗಲೇ ನಾಲ್ಕು ಬಾರಿ ಚುನಾಯಿತರಾಗಿದ್ದಂತಹ ಫರೀದ್‌ರವರು, ಇತ್ತೀಚಿನ ದಿನಮಾನಗಳಲ್ಲಿ ಅವರ

ದೈಹಿಕ ಆರೋಗ್ಯದ ಸ್ಥಿತಿ ಅಷ್ಟು ಚೆನ್ನಾಗಿರಲಿಲ್ಲ. ಆದ್ದರಿಂದ ಅವರು ಅನೇಕ ಬಾರಿ ವಿಧಾನಸಭೆಗೂ ಕೂಡ ಬರದೆ ತಮ್ಮಿಂದ ಪರವಾನಗಿಯನ್ನು ಕೂಡ ಪಡೆದುಕೊಂಡವರಾಗಿದ್ದರು. ಅವರು ಹೆಚ್ಚು ಸಕ್ರಿಯವಾಗಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗದೆ ಇದ್ದರೂ ಕೂಡ ಊಳ್ಳಾಲದಲ್ಲಿ ಅಲ್ಲಿನ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಬಹಳ ಮುಖ್ಯವಾದ ಪಾತ್ರಗಳನ್ನು ಅವರು ವಹಿಸುತ್ತಿದ್ದರು. ಅಲ್ಲಿ ಸೈಯದ್ ಮದನಿ ಚಾರಿಟಬಲ್ ಟ್ರಸ್ಟ್‌ನ ಉಪಾಧ್ಯಕ್ಷರಾಗಿ ಇದ್ದರೂ ಸಹ ಮದನಿ ಎನ್ನುವುದು ಯಾವಾಗಲೂ ಕೂಡ ಸಮುದ್ರದ ಮೇಲೆ ಬರುವವರು. ಮದಿನ, ಮದ ಎಂದು ಆ ಕಡೆಯಿಂದ ಬಂದಂತಹ ಸೂಫಿಸಂತರು ಅಲ್ಲಿ ಉಳ್ಳಾಲದಲ್ಲಿ ಇದ್ದರು ಎನ್ನುವುದಕ್ಕಾಗಿ ಅಲ್ಲಿ ಬಹಳ ದೊಡ್ಡ ಯಾತ್ರಾಸ್ಥಳ ಅದು ಆಗಿತ್ತು. ಹಿಂದು ಮುಸಲ್ಮಾನರು ಕೂಡ ಆ ದರ್ಗಾಕ್ಕೆ ನಡೆದುಕೊಳ್ಳುವಂಥಾದ್ದು ಇತ್ತು. ಅಲ್ಲದೆ ಅವರು ಬೇರೆಬೇರೆ ಸಾಮಾಜಿಕ ಕೆಲಸಕಾರ್ಯಗಳನ್ನು ಕೈಗೊಂಡಿದ್ದರು. ಎಲ್ಲಿ ಬಗ್ದಾದಿ ಎಂದು ಹೆಸರುಗಳು ಬರುತ್ತವೆ, ಅವರೆಲ್ಲರೂ ಭೂಮಾರ್ಗದಲ್ಲಿ ಭಾರತ ದೇಶಕ್ಕೆ ಬಂದಂತಹ ಸೂಫಿಸಂತರು. ಎಲ್ಲಿ ಮದನಿಗಳು, ಮದನ, ಮೆಕ್ಕಾಮದೀನ ಎಂದು ಬರುತ್ತದೆ, ಅವರು ಅನೇಕ ಬಾರಿ ಹಡಗಿನ ಮೂಲಕ ಮಾರ್ಗವನ್ನು ಕಂಡುಹಿಡಿದು ಅರಬ್ಬಿ ಸಮುದ್ರದ ಮೇಲೆ ಬರುತ್ತಿದ್ದರು, ಆ ರೀತಿ ಬಂದಿದ್ದಂತಹ ಸೂಫಿಸಂತರು ಈ ದೇಶದ ಧಾರ್ಮಿಕ ಪರಂಪರೆಗೆ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಅನುಗುಣವಾದಂತಹ ರೀತಿಯಲ್ಲಿ ಉಳ್ಳಾಲದಲ್ಲಿ ಅನೇಕ ಜೈನರ ಬಸ್ತಿಗಳಿವೆ. ಆ ಜೈನರ ಬಸ್ತಿಗಳಿಗೆ ಸಂಬಂಧಪಡುವಂತಹ ರೀತಿಯಲ್ಲಿ ಕೂಡ ಉಳ್ಳಾಲದ Charitable Trust ನ ಮೂಲಕ ಕೆಲಸ ಮಾಡುವುದು ಇತ್ತು. ನಾನು ಮೊನ್ನೆ ಕೂಡ ಅವರನ್ನು ಕಂಡಿದ್ದೆ. ಬಸ್ತಿಯನ್ನು ದುರಸ್ತಿಗೊಳಿಸುವಂತಹ ವಿಚಾರದಲ್ಲಿ ಅಲ್ಲಿನ ಜೈನ ಸಮಾಜ ತೆಗೆದುಕೊಂಡಿರುವಂತಹ ನಿಲುವಿನ ಬಗ್ಗೆ ಕೂಡ ಅವರು ಬಹಳ ಒಳ್ಳೆಯ ಸಲಹೆಗಳನ್ನು ಕೂಡ ಕೊಟ್ಟಿದ್ದರು. ಅದರ ಜೊತೆಗೆ ರಾಣಿ ಅಬ್ಬಕ್ಕದೇವಿ ವಿಚಾರ ಬಂದಾಗ ಮಾನ್ಯ ಫರೀದ್‌ರವರು ಬಹಳ ದೊಡ್ಡ ಒಂದು ಸೌಹಾರ್ದದ ಮಾತುಗಳನ್ನು ಹೇಳುವವರಾಗಿದ್ದರು. ರಾಣಿ ಅಬ್ಬಕ್ಕನ ಪಡೆಯಲ್ಲಿ

ಪೋರ್ಚುಗೀಸರ ವಿರುದ್ಧವಾಗಿ ಹೋರಾಟ ಮಾಡುವುದಕ್ಕೆ ಸುಮಾರು ಮೂರು ಸಾವಿರಕ್ಕಿಂತ ಹೆಚ್ಚು ಮುಸ್ಲಿಂ ಬಿಲ್ಲಾಳಗಳು ನಾವೆಯ ಮೂಲಕ ಹೋಗಿ ರಾಣಿ ಅಬ್ಬಕ್ಕದೇವಿಗೆ ಹೆಚ್ಚಿನ ಸಹಾಯ ಮಾಡಿರುವಂತಹ ಕಥೆ ಏನಿದೆ, ಅದು ಬಹಳ ಮುಖ್ಯವಾದ ಕಥೆ ಎನ್ನುವುದು ಕೂಡ ಅವರು ಪದೇಪದೇ ಸಾರ್ವಜನಿಕ ಜೀವನದಲ್ಲಿ ಒತ್ತು ಕೊಟ್ಟು ರಾಣಿ ಅಬ್ಬಕ್ಕನ ಮೂರ್ತಿ ಸ್ಥಾಪನೆಗೆ ಕೂಡ ಅವರು ಕೆಲಸ ಮಾಡಿದ್ದರು. ಅಂತಹ ಹಿರಿಯರಾದಂತಹ ಯು.ಟಿ. ಫರೀದರು ಖಂಡಿತವಾಗಿಯೂ ಈ ಸಲದ ಅವಧಿಯನ್ನು ಮುಗಿಸುತ್ತಾರೆ ಎಂದು ಭಾವಿಸಿಕೊಂಡಿದ್ದೆವು. ಆದರೆ ಅವರ ದೀರ್ಘಕಾಲದ ಅನಾರೋಗ್ಯದ ಕಾರಣಕ್ಕಾಗಿ ತೀರಿಕೊಂಡಿದ್ದಾರೆ. ಆದ್ದರಿಂದ ತಾವೇನು ಸಂತಾಪ ಸೂಚನ ನಿರ್ಣಯವನ್ನು ತಂದಿದ್ದೀರಿ, ಇಡೀ ಸದನ ನಿಮ್ಮ ಜೊತೆಗೆ ಸಂತಾಪವನ್ನು ವ್ಯಕ್ತ ಮಾಡಿ, ಉಳ್ಳಾಲದಲಿ ಹಿಂದು–ಮುಸ್ಲಿಂ ಗಲಭೆಗಳು ಆಗ, ಈಗ ಆಗುವುದೇನಿದೆ ಈ ಒಂದು ಸಂದೇಶದ ಮೂಲಕ ಅಲ್ಲಿ ಸೌಹಾರ್ದತೆಯ ವಾತಾವರಣ ಉಂಟಾಗಲಿ ಎಂದು ನಾನು ಕೂಡ ಪ್ರಾರ್ಥನೆ ಮಾಡಿಕೊಂಡು ಅವರ ನಿಧನದಿಂದ ಕುಟುಂಬ ವರ್ಗದವರಿಗೆ ಉಂಟಾಗಿರುವ ನಷ್ಟವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲೆಂದು ಹೇಳಿ, ನಮ್ಮ ಸಹಮತವನ್ನು ವ್ಯಕ್ತ ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಯು.ಟಿ. ಫರೀದ್‌ರವರು ನಮ್ಮ ಶಾಸನಸಭೆಯ ಸದಸ್ಯರಾಗಿ ನಾಲ್ಕು ಬಾರಿ ಆರಿಸಿ ಬಂದಿದ್ದಾರೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯ coastal ನಲ್ಲಿ ಪ್ರದೇಶದಲ್ಲಿ, ಇವತ್ತು ಒಳ್ಳೆಯ secular ಶಾಸಕರನ್ನು ಕಳೆದುಕೊಂಡಂತಾಗಿದೆ. ಅವರು ITCನಲ್ಲಿ labour field ನಲ್ಲಿ ಕೂಡ ಬಹಳಷ್ಟು ಕೆಲಸ ಮಾಡಿದ್ದಾರೆ. ಆ ಭಾಗದಲ್ಲಿ ಇರುವಂತಹ ಸಮಸ್ಯೆಗಳ ಬಗ್ಗೆ ಹೆಚ್ಚಿನ ರೀತಿಯಲ್ಲಿ ಕೂಡ ಪ್ರತಿಪಾದನೆ ಮಾಡತಕ್ಕಂಥ ಒಬ್ಬ ಒಳ್ಳೆಯ ವ್ಯಕ್ತಿಯಾಗಿದ್ದರು. ಅವರು ಅಲ್ಪಸಂಖ್ಯಾತರ ಸಮುದಾಯಕ್ಕೆ ಸಂಬಂಧ ಪಟ್ಟವರಾಗಿದ್ದರೂ ಕೂಡ ಆ coastal ಭಾಗದಲ್ಲಿರುವವರ ಪ್ರಗತಿ ಬಗ್ಗೆ, ಅಲ್ಲಿನ ಸಾಮಾಜಿಕ ಸಮಸ್ಯೆಗಳ ಬಗ್ಗೆ ಹೆಚ್ಚಿನ ರೀತಿಯಲ್ಲಿ ಯಾವಾಗಲೂ

ಬಂದು ನಮ್ಮ ಜೊತೆ ಸಮಾಲೋಚನೆ ಮಾಡುತ್ತಿದ್ದರು. ಅವರು ನಾಲ್ಕು ಸಲ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದಾರೆ. ಉಳ್ಳಾಲದಿಂದ ಎರಡನೇ ಬಾರಿ ಆಯ್ಕೆಯಾಗಿ ಬಂದಾಗ 18 ಸಾವಿರ ಬಹುಮತಗಳಿಂದ ಆಯ್ಕೆಯಾಗಿದ್ದರು. ಇದು ಅವರ ಜನಪ್ರಿಯತೆಯನ್ನು ಕೂಡ ಎತ್ತಿ ತೋರಿಸುತ್ತದೆ. ಅವರು ಇಂದು ಮುಂಜಾನೆ ಸಮಯ 5 ಗಂಟೆ 45 ನಿಮಿಷಕ್ಕೆ ನಿಧನರಾಗಿದ್ದಾರೆ. ಅವರ ಮಗ ನನಗೆ Phone ಮಾಡಿದ್ದರು. ಅವರೂ ಕೂಡ ವಿದ್ಯಾರ್ಥಿ ಸಂಘಟನೆಯ ನಾಯಕರಾಗಿದ್ದಾರೆ. ಇವತ್ತು ಯು.ಟಿ. ಫರೀದ್‌ರವರ ನಿಧನದಿಂದ ರಾಜ್ಯಕ್ಕೆ ಮತ್ತು ವಿಶೇಷವಾಗಿ ಕಾಂಗ್ರೆಸ್ ಪಕ್ಷಕ್ಕೆ ಒಬ್ಬ ನಾಯಕನನ್ನು ಕಳೆದುಕೊಂಡಂತಾಗಿದೆ. ಅದಕ್ಕೆ ತಾವು ಮಂಡಿಸಿದಂತಹ ಸಂತಾಪ ಸೂಚನೆಗೆ ಬೆಂಬಲ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಯು.ಟಿ. ಫರೀದ್‌ರವರು ನಮ್ಮ ಜೊತೆಯಲ್ಲಿ ನಾಲ್ಕು ಬಾರಿ ಸದಸ್ಯರಾಗಿ ಆರಿಸಿಬಂದಿದ್ದರು. ಅವರು ಒಬ್ಬ ಪ್ರಾಮಾಣಿಕ, ದಕ್ಷ ಹಾಗೂ ಹೆಸರು ವಾಸಿಯಾದಂತಹ ಶಾಸಕ. ಅವರ ಮತಕ್ಷೇತ್ರದಲ್ಲಿ ಅವರಿಗೆ ಅಪಾರವಾದ ಜನಬೆಂಬಲ ಇತ್ತು. ಉದಾಹರಣೆಗೆ ಅವರು ಖಾಯಿಲೆಯಿಂದ ಬಳಲುತ್ತಿದ್ದರೂ ಕೂಡ ಅವರಿಗೆ ಮತದಾರರ ಜೊತೆಯಲ್ಲಿ ಸಂಪರ್ಕ ಮಾಡುವುದಕ್ಕೆ ಆಗದೆ ಇದ್ದರೂ ಕೂಡ ಜನರೇ ಸ್ವತ: ಅವರ ಮನೆಗೆ ಬಂದು ಬೆಂಬಲವನ್ನು ಸೂಚಿಸಿ ನೀವೇ ನಿಲ್ಲಬೇಕೆಂದು ಅವರನ್ನು ನಿಲ್ಲಿಸಿ ಅವರನ್ನು 12ನೇ ವಿಧಾನಸಭೆಗೆ ಆರಿಸಿದರು. ಅಂತಹ ಒಬ್ಬ ವ್ಯಕ್ತಿ ಇವತ್ತು ನಮ್ಮಿಂದ ಅಗಲಿ ಹೋಗಿದ್ದಾರೆ. ಮಾನ್ಯ ಗೃಹ ಸಚಿವರು ಹೇಳಿದ ಹಾಗೆ ಆ ಭಾಗದಲ್ಲಿ ಅವರದೇ ಆದಂತಹ sect ಇತ್ತು. ಆ sectನ ಜನ ಹೆಚ್ಚಿನ ಪ್ರೀತಿ ಮತ್ತು ವಿಶ್ವಾಸವನ್ನು ಇವರ ಮೇಲೆ ಇಡುವುದಲ್ಲದೆ, ಆ ಸೂಫಿಸಂತರ ದರ್ಗಾ ಏನಿದೆ ಮದಾನಿ ಅಲ್ಲಿ ಹೆಚ್ಚಿನ ರೀತಿಯಲ್ಲಿ ಪ್ರಭಾವ ಕೂಡ ಇದೆ. ಅಂತಹ ಒಬ್ಬ ವ್ಯಕ್ತಿ ನಮ್ಮಿಂದ ಅಗಲಿ ಹೋಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಹಾಗೂ ಅವರ ಕುಟುಂಬಕ್ಕೆ ಅಗಲಿಕೆಯನ್ನು ಸಹಿಸುವಂತಹ ಶಕ್ತಿಯನ್ನು ದೇವರು ಕೊಡಲಿ ಎಂದು ಈ

ಸಂದರ್ಭದಲ್ಲಿ ಹೇಳಿ ತಾವು ಮಂಡಿಸಿದಂತಹ ಸಂತಾಪ ಸೂಚನೆಗೆ ನಾನು ಬೆಂಬಲವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಫರೀದ್‌ರವರು ಇಲ್ಲ ಎನ್ನುವಂತಹ ವಿಚಾರವನ್ನು ನಾನು ಬೆಳಿಗ್ಗೆ ಕೇಳಿದೆ. ಶಾಸಕರ ಭವನದಲ್ಲಿ ಅವರು ನಾನು ಹತ್ತಿರದ ರೂಮಿನಲ್ಲಿದ್ದೆವು. ಅವರು ಆಗಾಗ್ಗೆ ಸಿಗುತ್ತಿದ್ದರು. ಮಂಗಳೂರು ಜಿಲ್ಲೆಯಲ್ಲಿ ಆಗುತ್ತಿರುವಂತಹ ಗೊಂದಲಗಳು ಹಾಗೂ ಅನೇಕ ವಿಚಾರಗಳ ಬಗ್ಗೆ ಅವರು ಮುಕ್ತವಾಗಿ ನನ್ನ ಹತ್ತಿರ ಮಾತನಾಡುತ್ತಿದ್ದರು. ಅವರು ತುಂಬಾ ಸ್ಪಷ್ಟವಾಗಿ ಶಾಂತಿಯನ್ನು ಕಾಪಾಡಬೇಕು ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದಂತಹ ವ್ಯಕ್ತಿ. ಅಂತಹ ವ್ಯಕ್ತಿ ಇವತ್ತು ಇಲ್ಲವೆನ್ನುವುದನ್ನು ಕೇಳಿ ನಿಜಕ್ಕೂ ಬೆಳಿಗ್ಗೆ ನನಗೆ ತುಂಬಾ ನೋವು ಹಾಗೂ ದು:ಖವುಂಟಾಯಿತು. ಅನೇಕ ವರ್ಷಗಳಿಂದ ಅವರು ಅನಾರೋಗ್ಯದಿಂದ ಬಳಲುತ್ತಾ ಬಂದರು. ಇಂತಹ ಒಬ್ಬ ವ್ಯಕ್ತಿ ನಾಲ್ಕು ಬಾರಿ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದಾರೆಂದರೆ ಅವರು ಯಾವರೀತಿ ಸಾಮಾನ್ಯ ಜನರ ಜೊತೆ ಇದ್ದು ಅವರ ಕಷ್ಟ ಸುಖಕ್ಕೆ ಭಾಗಿಯಾಗುತ್ತಿದ್ದರು ಎನ್ನುವುದಕ್ಕೆ ಅವರು ನಾಲ್ಕು ಬಾರಿ ಗೆದ್ದು ಬಂದಿದ್ದೆ ಸಾಕ್ಷಿಯಾಗಿದೆ. ಅಂಥ ವ್ಯಕ್ತಿಯಾಗಿದ್ದ ಶ್ರೀ ಯು.ಟಿ. ಫರೀದ್ ರವರು ನಮ್ಮೊಂದಿಗೆ ಇಲ್ಲ. ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕೊಡಲಿಯೆಂದು ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ನಾನು ಹೇಳಲಿಚ್ಛಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಈ ಬಾರಿ ಶಾಸನಸಭೆ ಆರಂಭವಾದ ಮೇಲೆ, ಒಂದು ಕರಿ ಕಾರು ನಂ:1, ಇದರಲ್ಲಿ ಅವರನ್ನು ಎಲ್.ಹೆಚ್.ಗೆ ಕರೆದುಕೊಂಡು ಬರುವುದು, ಕರೆದುಕೊಂಡು ಹೋಗುವುದನ್ನು ನೋಡಿ, ನಾವೆಲ್ಲರೂ ಶ್ರೀ ಯು.ಟಿ. ಫರೀದ್‌ರವರು ಚುನಾವಣೆಯನ್ನು ಹೇಗೆ ಫೇಸ್ ಮಾಡಿದರೆಂದು ಅಂದು ಕೊಳ್ಳುತ್ತಿದ್ದೆವು. ಅವರ ದೊಡ್ಡತನ. ಅವರು ಅನಾರೋಗ್ಯದಲ್ಲಿದ್ದರೂ, ಚುನಾವಣೆಯನ್ನು ಗೆಲ್ಲುವುದಕ್ಕೆ ಆಯಿತು. ಅವರು ಈ ಸಭೆಗೆ ಬಂದಿದ್ದು ಬಹಳ ಕಡಿಮೆಯೆಂದು

ನಮಗೆಲ್ಲರಿಗೂ ಗೊತ್ತು. ಅವರ ಆರೋಗ್ಯ ಅಷ್ಟು ಚೆನ್ನಾಗಿ ಇರಲಿಲ್ಲ. ಆದರೂ ನಾವು ಮೆಟ್ಟಿಲನ್ನು ಇಳಿಯುವಾಗ, ಹತ್ತುವಾಗ ಜೊತೆಯಲ್ಲಿ ಇರುತ್ತಿದ್ದೆವು. ಅವರ ಜೊತೆಯಲ್ಲಿ ಆಗ ಮಾತನಾಡುತ್ತಿದ್ದೆವು. ಅವರು ಬಹಳ ಒಳ್ಳೆಯ ಮನುಷ್ಯರಾಗಿದ್ದರು. ಸಂಭಾವಿತ ಅವರು ಇವತ್ತು ನಮ್ಮ ಜೊತೆಯಲ್ಲಿ ಇಲ್ಲ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಕುಟುಂಬ ವರ್ಗದವರಿಗೆ ಇದನ್ನು ಭರಿಸುವ ಶಕ್ತಿ ಬರಲಿಯೆಂದು ಹಾರೈಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಯು.ಟಿ.ಫರೀದ್‌ರವರು ಈ ಸದನದ ಸದಸ್ಯರಾಗಿ, ಇವತ್ತು ಬೆಳಿಗ್ಗೆ ನಿಧನರಾದ ವಿಚಾರವನ್ನು ತಿಳಿದು, ಅತ್ಯಂತ ನೋವಾಗಿದೆ. ಇವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಇದರ ಜೊತೆಯಲ್ಲಿ ಮತ್ತೊಂದು ವಿಚಾರವೇನೆಂದರೆ, ನಮ್ಮ ಬೆಂಗಳೂರು ನಗರ ಪಾಲಿಕೆಯ ಮೇಯರ್ ಆಗಿದ್ದಂತಹ ಶ್ರೀ ಜೆ. ಲಿಂಗಯ್ಯನವರು ತೀರಿಕೊಂಡು ಎರಡು ದಿವಸಗಳು ಆಯಿತು. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು, ಕಾರ್ಮಿಕ ರಂಗದಲ್ಲಿ ಇದ್ದಂಥವರು ತೀರಿಕೊಂಡರು. ಅವರ ಬಗ್ಗೆಯೂ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದನ್ನು ಇವತ್ತೆ ತೆಗೆದುಕೊಂಡರೆ ಸಂತೋಷ.

ಅಧ್ಯಕ್ಷರು: ಅವರನ್ನು ಇವತ್ತೆ ಸೇರಿಸಿದೆ.

ಶ್ರೀ ವಾಟಾಳ್ ನಾಗರಾಜ್: ನಾನು ತಮ್ಮನ್ನು ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ. ನಾನು ಪ್ರತಿ ಬಾರಿಯೂ ಹೇಳುತ್ತಿದ್ದೇನೆ. ನಮ್ಮ ಮಾಜಿ ಶಾಸಕರುಗಳು ಆಗಲಿ, ಶಾಸಕರುಗಳಾಗಲಿ, ಅವರು ತೀರಿಕೊಂಡಾಗ ಸದನದಲ್ಲಿ ಸಂತಾಪ ಮಾಡಿದ ತಕ್ಷಣ ಅದು ಪರಿಹಾರವಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ತಮ್ಮ ಅಧ್ಯಕ್ಷತೆಯಲ್ಲಿ ತಕ್ಷಣ ಸರ್ವಪಕ್ಷಗಳ ಸಭೆಯನ್ನು ಕರೆದು ಏನು ಮಾಡಬಹುದೆಂಬ ತೀರ್ಮಾನಕ್ಕೆ ಬರಬೇಕೆಂದು ತಮಗೆ ತಿಳಿಸಿ, ಮಾನ್ಯ ಯು.ಟಿ.ಫರೀದ್‌ರವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ,. ನಾನು ಅವರನ್ನು ಮೊದಲ ಸಲ ಆಯ್ಕೆಯಾಗಿ ಇಲ್ಲಿಗೆ ಬಂದಾಗ ನೋಡಿದ್ದು. ನನಗೆ ಅವರು ಗೊತ್ತಿರಲಿಲ್ಲ, ಅವರನ್ನು ಲಿಫ್ಟ್ ಹತ್ತಿರ ಕೈಯನ್ನು ಹಿಡಿದುಕೊಂಡು ಬಂದರು. ಆಗ ನಾನು ಅವರನ್ನು ಹಿಡಿದುಕೊಂಡು ಬಂದವರನ್ನು ಅವರು ಯಾರು? ಎಂದು ಕೇಳಿದೆ. ಆಗ ಅವರು ಇಂಥವರೆಂದು ಹೇಳಿದಾಗ, ನನಗೆ ಬಹಳ ಬೇಸರವಾಯಿತು. ಆಗ ಅವರು ನಡೆಯುವ ಸ್ಥಿತಿಯಲ್ಲಿ ಇರಲಿಲ್ಲ. ಅಂಥ ಸ್ಥಿತಿಯಲ್ಲಿ ಅವರು ಚುನಾವಣೆಯಲ್ಲಿ ಗೆದ್ದಿದ್ದಾರೆಂದರೆ, ಅವರ ಮೇಲೆ ಜನರು ಯಾವ ರೀತಿಯಲ್ಲಿ ಅಭಿಮಾನವನ್ನು ಇಟ್ಟಿದ್ದರೆಂಬುದನ್ನು ತೋರಿಸುತ್ತದೆ. ಅವರು ಈ ಸದನದ ಸದಸ್ಯರಾಗಿ, ಆಯ್ಕೆಯಾದ ಮೇಲೆ ಅವರು ಇಲ್ಲಿಗೆ ಹೆಚ್ಚು ಸಮಯ ಬರಲಿಲ್ಲ. ನಮ್ಮ ಜೊತೆಯಲ್ಲಿ ಅವರು ಹೆಚ್ಚು ಸಮಯವನ್ನು ಕಳೆಯುವುದಕ್ಕೆ ಆಗಲಿಲ್ಲ. ಅವರಿಗೆ ಸಂತಾಪವನ್ನು ಸೂಚಿಸಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರಿಗೆ ಗೌರವವನ್ನು ಸಲ್ಲಿಸಿ, ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ (ಮುಂಡರಗಿ): ಮಾನ್ಯ ಅಧ್ಯಕ್ಷರೆ, ಶ್ರೀ ಯು.ಟಿ.ಫರೀದ್‌ರವರ ನಿಧನ ಸುದ್ದಿಯನ್ನು ಕೇಳಿ ನನಗೆ ಬಹಳ ನೋವಾಯಿತು. ಅವರು ನನಗೆ ಆತ್ಮೀಯರು ಆಗಿದ್ದರು. ಕೆಲವೇ ಹಿರಿಯ ಸಹಕಾರಿಣಿಗಳಲ್ಲಿ ಅವರು ಒಬ್ಬರು ಆಗಿದ್ದರು. ರಾಜ್ಯದ ಹಿರಿಯ ಸಹಕಾರಿಗಳು ಆಗಿದ್ದರು. ಅವರು ಅಪೆಕ್ಸ್ ಬ್ಯಾಂಕ್‌ನ ನಿರ್ದೇಶಕರಾಗಿದ್ದರು. ಹಲವು ಸಹಕಾರಿ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದಂಥ ಒಬ್ಬ ಹಿರಿಯ ಸಹಕಾರಿಗಳು ಆಗಿದ್ದಾರೆ. ಇವತ್ತು ಅವರ ನಿಧನದಿಂದ ಪ್ರಾಮಾಣಿಕ ಸಹಕಾರಿ ಕ್ಷೇತ್ರಕ್ಕೆ ದೊಡ್ಡ ಹಾನಿಯಾಗಿದೆ. ಅದೇ ರೀತಿಯಲ್ಲಿ ಈ ರಾಜ್ಯದ ಒಬ್ಬ ಪ್ರಾಮಾಣಿಕ ಶಾಸಕರು ಇವತ್ತು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅದು ಇಡೀ ರಾಜ್ಯಕ್ಕೆ ತುಂಬಲಾರದ ಹಾನಿಯಾಗಿದೆ. ಅದೇ ರೀತಿಯಲ್ಲಿ ನಮ್ಮ ಪಕ್ಷಕ್ಕೂ [illegible] ಅವರು ಒಮ್ಮೆ ಬರಲಿಲ್ಲವೆಂದರೆ, [illegible] ನವರು ಅವರಿಗೆ ಟಿಕೇಟ್ ಕೊಟ್ಟಿಲ್ಲ, ಅವರಿಗೆ ಟಿಕೇಟ್ ಕೊಟ್ಟಿದ್ದರೆ, ಅವತ್ತು ಅವರು ಚುನಾವಣೆಯಲ್ಲಿ ಆರಿಸಿ

ಬರುತ್ತಿದ್ದರು. ಅವರು ಅಷ್ಟೊಂದು ಜನಪ್ರಿಯತೆಯನ್ನು ಗಳಿಸಿಕೊಂಡು ಬೆಳೆದಂಥ ಒಬ್ಬ ಪ್ರಾಮಾಣಿಕ ರಾಜಕಾರಣಿಯಾಗಿದ್ದರು. ಅವರು ನಮ್ಮನ್ನು ಅಗಲಿರುವುದು, ಈ ರಾಜ್ಯಕ್ಕೆ, ಸಹಕಾರಿ ಕ್ಷೇತ್ರಕ್ಕೆ ತುಂಬಲಾರದ ಹಾನಿಯೆಂದು ಹೇಳುತ್ತಾ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ದು:ಖದಲ್ಲಿ ನಾನು ಭಾಗಿಯಾಗಿದ್ದೇನೆಂದು ಹೇಳುತ್ತಾ, ನಾನು ತಮಗೆ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ನಮ್ಮ ಹಿರಿಯ ಕಾಂಗ್ರೆಸಿಗರು ಮತ್ತು ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದ ಶ್ರೀ ಜೆ. ಲಿಂಗಯ್ಯನವರ ನಿಧನದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ವಿಶೇಷವಾಗಿ ಬೆಂಗಳೂರು ನಗರದ ಅಭಿವೃದ್ಧಿಯ ವಿಚಾರದಲ್ಲಿ, ಅವರು ಮಹಾಪೌರರಾಗಿ ಕೆಲಸವನ್ನು ಮಾಡಿರುವಂಥ ಹಿರಿಯ ವ್ಯಕ್ತಿಯಾಗಿದ್ದಾರೆ. ಇವರು 28ನೇ ತಾರೀಖಿನಂದು ತೀರಿಕೊಂಡರು. ಇವರಿಗೆ ಸಂತಾಪ ಸಲ್ಲಿಸುವಂಥಾದ್ದು ಸ್ವಲ್ಪ ತಡವಾಗಿ ಆಗುತ್ತಿದೆ. ಆದರೂ ಕೂಡ ಅವರು ಬಹಳ ಸರಳ ವ್ಯಕ್ತಿಗಳಾಗಿದ್ದರು. ಇವತ್ತಿನ ರಾಜಕಾರಣದ ವ್ಯವಸ್ಥೆಯನ್ನು ನಾವು ನೋಡಿದಾಗ, ಈ ರೀತಿಯ ಜನರು ಬಹಳ ಕಡಿಮೆ ಇದ್ದಾರೆ. ಇವತ್ತು ಅವರ ಕುಟುಂಬವರ್ಗದವರು ಕೂಡ ಅದೇ ಸರಳತೆಯಿಂದ ಮತ್ತು ಯಾವುದೇ ರೀತಿಯ ದರ್ಪ, ಅಹಂಕಾರವಿಲ್ಲದೆ ಇರುವಂಥ ಕುಟುಂಬವಾಗಿದೆ. ನಾನು ಮೊನ್ನೆ ಅವರ ಮನೆಗೆ ಹೋಗಿದ್ದಾಗ, ಅವರು ಹೇಳಿದ ವಿಚಾರವೇನೆಂದರೆ ಅವರು ಮೇಯರ್ ಆಗಿ ಆಯ್ಕೆಯಾದ ದಿವಸ ರಾತ್ರಿ 12.00 ಗಂಟೆಗೆ ಮನೆಗೆ ಬಂದರಂತೆ. ಅವರು ಮನೆಗೆ ಬಂದಮೇಲೆ ಅವರ ಕುಟುಂಬ ವರ್ಗದವರೆಲ್ಲರನ್ನು ಸೇರಿಸಿದರಂತೆ, ಅವರ ಹೆಂಡತಿ, ಮಕ್ಕಳೆಲ್ಲರನ್ನು ಕರೆದು, ನಾನು ಇವತ್ತು ಈ ನಗರದ ಮುಖ್ಯ ವ್ಯಕ್ತಿಯಾಗಿದ್ದೇನೆ. ಆದರೆ ನೀವು ಯಾರಾದರೂ ನಮ್ಮ ತಂದೆ, ಗಂಡ ಈ ರೀತಿಯ ದೊಡ್ಡ ವ್ಯಕ್ತಿ. ಬೆಂಗಳೂರು ನಗರ ಪಾಲಿಕೆಯ ಮೇಯರ್ ಆಗಿದ್ದಾನೆಂದು ದುರುಪಯೋಗ ಮಾಡಿಕೊಳ್ಳುವಂಥ ಪ್ರಯತ್ನವನ್ನು ಮಾಡಿದರೆ, ನಾನು ಅದನ್ನು

ಸಹಿಸುವುದಿಲ್ಲವೆಂಬ ರೀತಿಯಲ್ಲಿ ಅವರು ಆಯ್ಕೆಗೊಂಡ ದಿವಸವೇ ಮಾತನಾಡಿದ್ದಾರೆ. ಆ ರೀತಿಯ ಪ್ರಾಮಾಣಿಕತೆ ಇರುವಂತಹ ವ್ಯಕ್ತಿಯಾಗಿದ್ದರು. ಅವರು ಮದ್ದೂರು ತಾಲ್ಲೂಕಿನವರು ಆಗಿದ್ದಾರೆ. ಇವರು ಮಾನ್ಯ ತಮ್ಮಣ್ಣನವರ ಊರಿನವರೆಂದು ಕಾಣುತ್ತದೆ. ಅವರು ಮೃತರಾದಾಗ ಆನೇಕ ಜನರು ಊರಿನಿಂದ ಬಂದಿದ್ದರು. ಅವರಿಗೆ 92 ವರ್ಷಗಳಾಗಿದ್ದು, ಅವರ ಬಗ್ಗೆ ಇವತ್ತಿಗೂ ಪ್ರೀತಿ, ಕಾಳಜಿ ಇದೆ. ಇವರನ್ನು ಈ ರಾಷ್ಟ್ರದ ಒಬ್ಬ ಭಕ್ತ ಪ್ರೇಮಿಯೆಂದು ಹೇಳಿದರೂ ತಪ್ಪಾಗಲಾರದು. ಇವರು ಸ್ವಾತಂತ್ರ್ಯ ಹೋರಾಟಗಾರರು ಆಗಿದ್ದವರು. ಇವರ ನಿಧನದಿಂದ ತುಂಬಲಾರದ ನಷ್ಟವಾಗಿದೆಯೆಂದು ಹೇಳುತ್ತಾ, ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಶ್ರೀ ಯು.ಟಿ.ಫರೀದ್‌ರವರು ನನ್ನ ಆತ್ಮೀಯ ಮಿತ್ರರು, ಹಾಗೂ ಹಿರಿಯ ಸಹೋದರರಂತೆ ನನ್ನ ಪಕ್ಕದ ಕ್ಷೇತ್ರದಲ್ಲಿ ಒಳ್ಳೆಯ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಅವರು ದೀರ್ಘಕಾಲದ ಅನಾರೋಗ್ಯದಿಂದ ದೈವಾಧೀನರಾಗಿದ್ದಾರೆ. ನಾನು ಅವರಲ್ಲಿ ಗುರುತಿಸಿರುವಂತಹ ವಿಚಾರಗಳೆಂದರೆ ಅನೇಕ ಕ್ಲೀಷ್ಟಕರ ಸಂಗತಿಗಳಲ್ಲಿ ಅನೇಕ ಸಮಸ್ಯೆಗಳು ಉದ್ಭವವಾಗುವಂತಹ ಸಂದರ್ಭದಲ್ಲಿ , ಎಲ್ಲಾ ರಾಜಕೀಯವನ್ನು ಮೀರಿ, ನಾವು ಒಂದಾಗಿ ಯಾವುದೇ ರೀತಿಯ ಒಂದು ಶಾಶ್ವತವಾದ ಶಾಂತಿಯನ್ನು ಈ ಜಿಲ್ಲೆಗೆ ತರಬೇಕೆಂಬ ಚಿಂತನೆಯ ಧಾಟಿ ಅವರಲ್ಲಿ ಏನು ಇತ್ತು. ಆನೇಕ ಸಂದರ್ಭಗಳಲ್ಲಿ ಅವರು ಮುಕ್ತವಾಗಿ ನನ್ನ ಬಳಿ ಅವರ ಅನಿಸಿಕೆಗಳನ್ನು ಹೇಳುತ್ತಿದ್ದರು. ಈ ರೀತಿಯಾಗಿ ಎಂಥೆಂಥ ಸಮಸ್ಯೆಗಳು ಉದ್ಭವವಾಗುತ್ತಿವೆ. ಇದಕ್ಕೆ ನಾವು ಪರಿಹಾರವನ್ನು ಕಾಣಬೇಕೆಂಬ ನಿಟ್ಟಿನಲ್ಲಿ ಅವರು ತಾಳಿದಂತಹ ಆ ಧೋರಣೆಗಳನ್ನು ಸಹ ನಾನು ಈ ಸಂದರ್ಭದಲ್ಲಿ ಶ್ಲಾಘಿಸುತ್ತಿದ್ದೇನೆ. ಅದರಲ್ಲೂ ವಿಶೇಷವಾಗಿ ಅತ್ಯಂತ ಕಡುಬಡ ರೋಗಿಗಳು ಸುಮಾರು ಎರಡು ಲಕ್ಷಕ್ಕಿಂತ ಹೆಚ್ಚು ಜನ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ಈ ಆಸ್ಪತ್ರೆಗೆ ಒಂದು ಕಾಯಕಲ್ಪವನ್ನು

ಕೊಡಬೇಕು. ಈ ಆಸ್ಪತ್ರೆಯನ್ನು ಖಾಸಗಿ ಆಸ್ಪತ್ರೆಗೆ ಸರಿಸಮನಾಗಿ ಇದನ್ನು ರೂಪಿಸಬೇಕೆಂಬ ನಿಟ್ಟಿನಲ್ಲಿ ನಾವು ಇಬ್ಬರೂ ಸೇರಿಕೊಂಡು ಹಲವಾರು ಯೋಜನೆಗಳನ್ನು ಮಾಡಿದ್ದು ಇದೆ. ಅವರು ಹಿರಿಯರಾಗಿ ಶಾಸಕರಾಗಿ ಆಯ್ಕೆಯಾಗಿದ್ದಂತಹ ಸಂದರ್ಭದಲ್ಲಿ, ಅವರು ಮಾಡಿರುವಂತಹ ಪ್ರಯತ್ನವನ್ನು ನಾವು ಮುಂದುವರೆಸಬೇಕೆಂದು ಹೇಳಿ, ಅವರು ನನಗೆ ಕೊಟ್ಟಿರುವಂತಹ ಪ್ರೇರಣೆ ಕೂಡ ನಾನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ರಾಣಿ ಅಬ್ಬಕ್ಕನ ವಿಗ್ರಹ ಸ್ಥಾಪನೆ ಮತ್ತು ಅಲ್ಲಿ ಶಾಶ್ವತವಾದ ಸ್ಮಾರಕವನ್ನು ಮಾಡಬೇಕೆಂಬ ಆ ಹಿನ್ನಲೆಯಲ್ಲಿ, ಪರಸ್ಪರ ಸಾಮರಸ್ಯದ ಸಂಕೇತವಾಗಿ ಇದನ್ನು ಬೆಳೆಸಬೇಕೆಂದು ಅವರು ಹೇಳುವಂತಹ ಚಿಂತನೆ, ಹಾಗೂ ಅಲ್ಲಿ ನಡೆಯುವಂತಹ ಉರುಸು ಕಾರ್ಯಕ್ರಮ, ಸೈಯದ್ ಮದಾನಿ ಚಾರಿಟಬಲ್ ಟ್ರಸ್ಟ್‌ನ ಅಡಿಯಲ್ಲಿ ನಡೆಯುವ ಉರುಸು ಕಾರ್ಯಕ್ರಮಕ್ಕೆ ನಾನು ಪ್ರತಿ ವರ್ಷ ಆಹ್ವಾನಿತನಾಗಿ ಹೋಗುತ್ತಿದ್ದೆ. ಆ ಸಂದರ್ಭದಲ್ಲಿ ಅಲ್ಲಿ ನಡೆಯುವಂಥ ಕಾರ್ಯಕ್ರಮದಲ್ಲಿ ಕೂಡ, ಎಲ್ಲರೂ ಬಂದು ಭಾಗವಹಿಸಬೇಕು, ಭಾವೈಕ್ಯತೆಯ ಸಂಕೇತವಾಗಬೇಕೆಂದು ಅವರು ಹೇಳುವ ನಿಟ್ಟಿನಲ್ಲಿ ಅವರು ಪಟ್ಟಿರುವಂತಹ ಪರಿಶ್ರಮ, ಮತ್ತು ಕಳಕಳಿ ಅದನ್ನು ಕೂಡ ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ. ನಾವು ಒಬ್ಬ ಒಳ್ಳೆಯ ಸನ್ಮಿತ್ರನನ್ನು ಕಳೆದುಕೊಂಡಿದ್ದೇವೆ. ಸನ್ಮಾನ್ಯ ಯು.ಟಿ.ಫರೀದ್‌ರವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಅವರ ಕುಟುಂಬಕ್ಕೂ ಕೂಡ ಭಗವಂತನು ದು:ಖವನ್ನು ಭರಿಸುವ ಶಕ್ತಿಯನ್ನು ನೀಡಲಿ, ಎಂದು ಪ್ರಾರ್ಥಿಸಿ, ನನ್ನ ಜಿಲ್ಲೆಯ ಪರವಾಗಿ ನನ್ನ ಕ್ಷೇತ್ರದ ಶಾಸಕರ ಹಾಗೂ ಜನತೆಯ ಪರವಾಗಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು: ದಿವಂಗತರಾದ ಶ್ರೀ ಯು.ಟಿ.ಫರೀದ್‌ರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಬೆಳಿಗ್ಗೆ 11 ಗಂಟೆ 30 ನಿಮಿಷಕ್ಕೆ ಮುಕ್ತಾಯಗೊಂಡು ಪುನ:
ದಿನಾಂಕ 7ನೇ ಫೆಬ್ರವರಿ ಮಾಹೆ 2007ರ ಬುಧವಾರದಂದು
ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಃಶ್ಚಯಿಸಿತು)

– – –